ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 118(490)

ಸದಸ್ಯರ ಹೆಸರು ಶ್ರೀ ಎಸ್ ಸುರೇಶ್‌ಕುಮಾರ್(ರಾಜಾಜಿನಗರ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯ ಮಂತ್ರಿಯವರು)

ಪ್ರಶ್ನೆ

ಅ) ರಾಜಾಜಿನಗರ ಪ್ರವೇಶ ದ್ವಾರದಿಂದ ಸಿಟಿ ರೈಲ್ವೆ ನಿಲ್ದಾಣದ ಕಡೆಗೆ ಹೋಗುವ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ತೊಂದರೆ ತಪ್ಪಿಸಲು ಸರ್ಕಾರ ಯೋಜಿಸಿರುವ ಕ್ರಮಗಳೇನು?

ಇ) ಈ ಭಾಗದಲ್ಲಿ ಒಂದು ವಿಶೇಷ ಕಾರಿಡಾರ್ ರಸ್ತೆ ರಚಿಸುವ ಯೋಜನೆ ಸರ್ಕಾರದ ಮುಂದಿದೆಯೇ? (ವಿವರಗಳನ್ನು ನೀಡುವುದು)

ಉತ್ತರ

ಅ) ಹೌದು

ಆ) 1 ವಾಟಾಳ್ ನಾಗರಾಜ್ ರಸ್ತೆಯನ್ನು ರಾಜಾಜಿನಗರ ಪ್ರವೇಶ ದ್ವಾರದಿಂದ ಓಕಳಿಪುರಂವರೆಗೆ ವಿಸ್ತರಣೆ ಮಾಡುವುದು

2 ರಾಜಾಜಿನಗರ ಪ್ರವೇಶ ದ್ವಾರದ ನಮೀವ ಕೆಳ ಸೇತುವೆ ನಿರ್ಮಿಸುವುದು

3 ಸುಜಾತ ಸಿನಿಮಾ ಮಂದಿರದ ಹತ್ತಿರ ಪಾದಚಾರಿ ಸುರಂಗ ಮಾರ್ಗ ನಿರ್ಮಿಸುವುದು

ಇ) ಹೌದು ವಿವರಗಳನ್ನು ಮೇಲೆ ನೀಡಲಾಗಿದೆ

ಮೈನೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯ ಗೃಹ ಸಹಕಾರಿ ಸಂಘಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 119(500)

ಸದಸ್ಯರ ಹೆಸರು ಶ್ರೀ ಗುರುಸ್ವಾಮಿ ಎ ಎಸ್ (ಚಾಮುಂಡೇಶ್ವರಿ)

ಉತ್ತರಿಸುವ ಸಚಿವರು ಶ್ರೀ ಬಿ ಬಿ ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು)

ಪ್ರಶ್ನೆ

ಅ) ಮೈಸೂರು ಮುಡಾ ವ್ಯಾಪ್ತಿಯಲ್ಲಿ ನೋಂದಾಯಿಸಲ್ಪಟ್ಟ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆ ಎಷ್ಟು?

ಆ) ಸದರಿ ಸಂಘಗಳಿಗೆ ಹಂಚಲಾದ ಜಮೀನಿನ ವಿಸ್ತೀರ್ಣ ಎಷ್ಟು?

ಇ) ಈ ಸಂಘಗಳು ಕ್ರಮಬದ್ಧವಾಗಿ ಕಾರ್ಯ ನಿರ್ವಹಿಸುತ್ತವೆಯೆ?

ಈ) ಸದರಿ ಸಂಘಗಳು ಮೂಲಭೂತ ಸೌಲಭ್ಯಗಳನ್ನು ಒವ್ವಂದಕ್ಕೆ ಅನುಗುಣವಾಗಿ ಒದಗಿಸಿದೆಯೇ?

ಉ) ಸದರಿ ಸಂಘಗಳ ವೈಕಿ ಕಾನೂನುಗಳನ್ನು ಉಲ್ಲಂಘಿಸಿದ ಸಂಘಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು?

ಊ) ಕಾನೂನುಗಳನ್ನು ಉಲ್ಲಂಘಿಸಿದ ನಂಘಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು?

ಉತ್ತರ

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸುಮಾರು 40 ಗೃಹ ನಿರ್ಮಾಣ ಸಹಕಾರ ಸಂಘಗಳು ವಸತಿ ಬಡಾವಣೆ ನಿರ್ಮಾಣ ಮಾಡಿರುತ್ತವೆ

ಆ, ಇ ಈ, ಉ ಮತ್ತು ಊ) ಮೇಲ್ಕಂಡ ಗೃಹ ನಿರ್ಮಾಣ ಸಹಕಾರ ಸಂಘಗಳು ಮೈಸೂರು ಜಿಲ್ಲಾಧಿಕಾರಿಗಳ ಮೂಲಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳಬೇಕು, ಇಲ್ಲವೇ ಭೂ ಮಾಲೀಕರಿಂದ ಖರೀದಿ ಮಾಡಿಕೊಳ್ಳಬೇಕಾಗುತ್ತದೆ ಈ ಸಂಘಗಳಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಯಾವುದೇ ಜಮೀನುಗಳನ್ನು ಹಂಚಿಕೆ ಮಾಡುವುದಿಲ್ಲ ಬಡಾವಣೆ ನಿರ್ಮಾಣ ಮಾಡುವ ಮೊದಲು ವಸತಿ ಬಡಾವಣೆ ಯೋಜನೆಯನ್ನು ಮಂಜೂರು ಮಾಡಿಸಿಕೊಳ್ಳಬೇಕಾಗುತ್ತದೆ ಆ ರೀತಿ ರಚಿಸಿದ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ ಉದ್ಯಾನವನ, ಬಯಲು ಜಾಗ ಮತ್ತು ನಾಗರೀಕ ಸೌಕರ್ಯ ನಿವೇಶನಗಳಿಗಾಗಿ ಕಾಯ್ದರಿಸಿದ ಜಾಗ ಮತ್ತು ವ್ರದೇಶವನ್ನು ಪ್ರಾಧಿಕಾರ ತನ್ನ ವಶಕ್ಕೆ ವಡೆಯಲಾಗುತ್ತದೆ 2 ಗೃಹ ನಿರ್ಮಾಣ ಸಹಕಾರ ಸಂಘಗಳು, ಅವುಗಳೆಂದರೆ ಮಧುವನ ಮತ್ತು ಮೈಸೂರು ಬ್ಯಾಂಕ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘಗಳು ಈ ನಿಬಂಧನೆಗಳನ್ನು ಉಲ್ಲಂಘಿಸಿ ನಾಗರೀಕ ಸೌಕರ್ಯ ನಿವೇಶನಗಳ

ಮೇಲೂ ವಸತಿ ಗೃಹಗಳನ್ನು ನಿರ್ಮಿಸಿರುವುದು ಕಂಡುಬಂದಿರುತ್ತದೆ ಅಂತಹ ಕಟ್ಟಡ ನಿರ್ಮಾಣಗಳನ್ನು ತಡೆಹಿಡಿಯಲಾಗಿದೆ

ರಾಜ್ಯದಲ್ಲಿ ಕುಡಿಯುವ ನೀರಿನ ಪೂರೈಕೆ ಕಾಮಗಾರಿಗಳಿಗೆ ನೇರ ಗುತ್ತಿಗೆ ನೀಡಿರುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 120(508)

ಸದಸ್ಯರ ಹೆಸರು ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ (ಮುಖ್ಯ ಮಂತ್ರಿಯವರು)

ಪ್ರಶ್ನೆ

1 ರಾಜ್ಯದಲ್ಲಿ ಟೆಂಡರ್ ಕರೆಯದೆ ಏಳು ಕುಡಿಯುವ ನೀರಿನ ಪೂರೈಕೆ ಕಾಮಗಾರಿಗಳಿಗೆ ನೇರ ಗುತ್ತಿಗೆ ನೀಡಿರುವುದು ನಿಜವಲ್ಲವೇ?

2 ಹಾಗಿದ್ದಲ್ಲಿ ಈ ಎಲ್ಲಾ ಕುಡಿಯುವ ನೀರಿನ ಪೂರೈಕೆ ಕಾಮಗಾರಿಗಳ ಅಂದಾಜು ವೆಚ್ಚವೆಷ್ಟು?

3 ಈ ರೀತಿ ಟೆಂಡರ್ ಕರೆಯದೇ ನೇರ ಗುತ್ತಿಗೆ ನೀಡಲು ಕಾರಣಗಳೇನು?

ಉತ್ತರ

1 ಇಲ್ಲ ಕೇವಲ 3 ಕಾಮಗಾರಿಗಳನ್ನು ಮಾತ್ರ ಸರ್ಕಾರದ ವಾರದರ್ಶಕ ಸಾರ್ವಜನಿಕ ಸಂಗ್ರಹಣ ಶಾಸನ ಜಾರಿಗೆ ಬರುವುದಕ್ಕೆ ಮುಂಚ ನೇರವಾಗಿ ಭಾರತ ಸರ್ಕಾರದ ಸ್ವಾಮ್ಯದ ಸಂಸ್ಥೆಗಳಿಗೆ ವಹಿಸಲಾಗಿದೆ

2 ಮೂರು ಕಾಮಗಾರಿಗಳ ಒಟ್ಟು ಮೊತ್ತ ರೂ 17 696 ಕೋಟಿಗಳು

3 ಬಳ್ಳಾರಿ ಲಿಂಗಸೂಗುರು ಮತ್ತು ಅಣ್ಣಿಗೇರಿ ನೀರು ಸರಬರಾಜು ಯೋಜನೆಗಳಲ್ಲಿ ನೀರು ಸಂಗ್ರಹಣ ಟ್ಯಾಂಕುಗಳ ನಿರ್ಮಾಣ ಕಾಮಗಾರಿಗಳನ್ನು ಟಂಡರ್ ಕರೆದು ವಹಿಸಲು ಹೆಚ್ಚು ಕಾಲಾವಕಾಶ ಬೇಕಾದ್ದುದರಿಂದ ಈ ಟ್ಯಾಂಕುಗಳ ನಿರ್ಮಾಣ ಕಾಮಗಾರಿಗಳನ್ನು ಜಾಗ್ರತೆ ಮುಗಿಸುವ ದೃಷ್ಟಿಯಿಂದ ಕೇಂದ್ರ ಸರ್ಕಾರ ಸ್ವಾಮ್ಯದ ಮೆ ಹೆಚ್ ಎನ್ ಸಿ ಎಲ್ ಸಂಸ್ಥೆಗೆ ನೇರವಾಗಿ ವಹಿಸಲಾಗಿದೆ